1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಮಳವಳ್ಳಿ

ಸಿಸಿ ನಂಃ 209/2018

ಪಿಡಬ್ಲೂಃ 1 ಸಿಡಬ್ಲ್ಯೂಃ 1

| | |
|---|---|
| ಸಾಕ್ಷಿದಾರರ ಹೆಸರು | ರಮೇಶ |
| ತಂದೆಯ ಹೆಸರು | ರಾಮಯ್ಯ |
| ವಯಸ್ಸು | 61 ವರ್ಷ |
| ಉದ್ಯೋಗ | ನಿವೃತ್ತ ಸಬ್ ಇನ್ಸಪೆಕ್ಟರ್ |
| ವಾಸ | ಮಂಡ್ಯ |

ಸಾಕ್ಷಿಯನ್ನು ದಿನಾಂಕಃ-10.07.2023ರಂದು ಪ್ರಮಾಣ ಮಾಡಿಸಲಾಯಿತು
ಮುಖ್ಯ ವಿಚಾರಣೆಃ- ಶ್ರೀ ಸ.ಸ.ಅ. ರವರಿಂದ.

1. ನಾನು ಮೇ 2015 ರಿಂದ ಏಪಿರಲ್ 2021 ರವರೆಗೆ ಹಲಗೂರು ಪೋಲೀಸ್ ಠಾಣೆಯಲ್ಲಿ ಆರಕ್ಷಕ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕಃ-12.06.2017 ರಂದು ಮದ್ಯಾಹ್ನ 3.30 ಕ್ಕೆ ಬಾತ್ಮಿದಾರರಿಂದ ರಾಜು ಬಿನ್ ತಿಮ್ಮೆಗೌಡ ಎಂಬುವರು ಕೆಎ 11 ವೈ 2741 ಬೈಕಲ್ಲಿ ಅಕ್ರಮವಾಗಿ ಮದ್ಯವನ್ನು ತೆಗೆದುಕೊಂಡು ಮುತ್ತತ್ತಿ ರಸ್ತೆಯಲ್ಲಿ ಹೋಗುತ್ತಿದ್ದಾರೆ ಎಂದು ಬಂದ ಮಾಹಿತಿ ಮೇರೆಗೆ ನಾನು ಠಾಣಯಲ್ಲಿ ಇದ್ದ ಚಾಸ 4 , 5 ರವರನ್ನು ನಮ್ಮ ಸ್ವಂತ ದ್ವಿಚಕ್ರ ವಾಹನದಲ್ಲಿ ಠಾಣೆಯಿಂದ ಹೊರಟು ಹಲಗೂರು ಸರ್ಕಲನಲ್ಲಿ ಪಂಚರಾದ ಚಾಸ 2 , 3 ರವರಿಗೆ ವಿಚಾರ ತಿಳಿಸಿ ಅವರನ್ನು ಪಂಚರಾಗಿ ಇರಲು ಕೋರಿಕೊಂಡು ಅವರನ್ನು ಜೊತೆಗೆ ಕರೆದುಕೊಂಡು ಮುತ್ತತ್ತಿ ಚೆಕ್ ಪೋಸ್ಟ ಬಳಿ 4 ಗಂಟೆ ಸಮಯದಲ್ಲಿ ಹೋಗಿ ಸದರಿ ವ್ಯಕ್ತಿಯನ್ನು ಮತ್ತು ದ್ವಿಚಕ್ರ ವಾಹನ ನಿಲ್ಲಿಸಿ ಆತನನ್ನು ವಿಚಾರಿಸಲಾಗಿ ಅವನು ತನ್ನ ಹೆಸರು ರಮೇಶ ಬಿನ್ ಮುತ್ತುರಾಜು ಬಿನ್ ತಮ್ಮೆಗೌಡ ಎಂದು ತಿಳಿಸಿದ್ದು ಮತ್ತು ದ್ವಿಚಕ್ರ ವಾಹನವನ್ನು ಪರಿಶೀಲಿಸಿ ನೋಡಲಾಗಿ ಅದರಲ್ಲಿ ಒಂದು ಬಟ್ಟೆ

ಬ್ಯಾಗಿದ್ದು ಅದರಲ್ಲಿ 90 ಎಂ ಎಲ್ ನ 43 ಹೈವರ್ಡ್ಸ್ ಚಿಯರ್ ವಿಸ್ಕಿ ಟೆಟ್ರ ಪ್ಯಾಕುಗಳಿದು ತಲಾ ಒಂದೊಂದರ ಬೆಲೆ 28.13 ಎಂದು ಎಂ ಆರ್ ಪಿ ಇತ್ತು. ಅವುಗಳ ಬಗ್ಗೆ ಆರೋಪಿಯನ್ನು ವಿಚಾರಣೆ ಮಾಡಲಾಗಿ ತನ್ನ ಬಳಿ ಮದ್ಯ ಸಾಗಣೆ ಮಾಡಲು ಯಾವುದೆ ಪರವಾನಗಿ ಇಲ್ಲ ಮತ್ತು ರಶೀದಿಗಳು ಇಲ್ಲ ಎಂದು ತಿಳಿಸಿದ್ದು ಅವುಗಳನ್ನು ಚಾಸ 2 , 3 ರವರ ಸಮಕ್ಷಮ ಮಹಜರು ಸಂಜೆ 4.15 ರಂದ 5.00 ಗಂಟೆ ವರೆಗೆ ಜರುಗಿಸಿ ಅಮಾನತುಪಡಿಸಿಕೊಂಡು ಅವುಗಳಲಿ ಒಂದನ್ನು ರಾಸಾಯನಿಕ ಪರೀಕ್ಷೆಗೆ ಕಳುಸುವ ಸಲುವಾಗಿ ಹೆಚ್ ಎಂಬ ಅಕ್ಷರದಿಂದ ಸೀಲು ಮಾಡಿರುತ್ತೇನೆ. ಅವುಗಳ ಒಟ್ಟು ಬೆಲೆ 1209.59 ಇರುತ್ತದೆ. ಅವುಳನ್ನು ಮತ್ತು ಆರೋಪಿಯನ್ನು ಸಂಜೆ 5.30 ಕ್ಕೆ ಠಾಣೆಗೆ ಕರೆದುಕೊಂಡು ಬಂದು ಸ್ವಯಂ ವರದಿ ತಯಾರಿಸಿ ಸಂಜೆ 5.45 ಕ್ಕೆ ಮೊಕದ್ದಮೆ ಸಂಖ್ಯೆ 177/17 ನ್ನು ದಾಖಲಿಸಿಕೊಂಡು ಪ್ರ ವ ವ ಯನ್ನು ನ್ಯಾಯಾಲಯಕ್ಕೆ ಮತ್ತು ಹಿರಿಯ ಅಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಹಾಗೂ ಅಮಾನತುಪಡಿಸಿಕೊಂಡ ವಸ್ತುಗಳನ್ನು ಠಾಣ ಮಾಲುಪಟ್ಟಿ ಸಂಖ್ಯೆ 122/17 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ರವಾನಿಸಿರುತ್ತೇನೆ. ನಂತರ ಆರೋಪಿಯನ್ನು ಸೂಕ್ತ ಬಂಧನದಲ್ಲಿ ಇರಿಸಿ ಮುಂದಿನ ಕ್ರಮಕ್ಕೆ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ನಂತರ ಸಾಕ್ಷಿದಾರರಾದ ಚಾಸ 2 , 3 , 4 , 5 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಹಾಗೂ ಚಾಸ 6 ರಿಂದ 9 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಎಫ್ ಎಸ್ ಎಲ್ ವರದಿಯನ್ನು ದಿಃ 18.8.2017 ರಂದು ಸ್ವೀಕರಿಸಿ ದಾಖಲೆಗೆ ಅಳವಡಿಸಿಕೊಂಡಿರುತ್ತೇನೆ. ಈ ಕೇಸಿನ ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿಗಳ ವಿರುದ್ದ ನ್ಯಾಯಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತೇನೆ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಅದು ಸ್ವಯಂ ದೂರಾಗಿದ್ದು ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸುತ್ತಾರೆ. ಸದರಿ ದಾಖಲೆಯನ್ನು ನಿಪಿ-1 ಎಂದು ಸಾಕ್ಷಿ ಸಹಿಯನ್ನು ನಿಪಿ-1ಎ ಎಂದು ಗುರುತಸಲಾಯಿತು. ಸಾಕ್ಷಿಗೆ ಈಗ ಇನ್ನೊಂದು ದಾಖಲೆಯನ್ನು ತೋರಿಸಲಾಗಿ

ಅದು ಮಹಜರಾಗಿದ್ದು ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸುತ್ತಾರೆ. ಸದರಿ ದಾಖಲೆಯನ್ನು ನಿಪಿ-2 ಎಂದು ಸಾಕ್ಷಿ ಸಹಿಯನ್ನು ನಿಪಿ-2ಎ ಎಂದು ಗುರುತಸಲಾಯಿತು. ಈಗ ಒಂದು ದಾಖಲೆಯನ್ನು ತೋರಿಸಲಾಗಿ ಅದು ಎಫ್ ಎಸ್ ವರದಿಯಾಗಿದ್ದು ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸುತ್ತಾರೆ. ಸದರಿ ದಾಖಲೆಯನ್ನು ನಿಪಿ-3 ಎಂದು ಸಾಕ್ಷಿ ಸಹಿಯನ್ನು ನಿಪಿ-3ಎ ಎಂದು ಗುರುತಸಲಾಯಿತು. ಈಗ ಒಂದು ದಾಖಲೆಯನ್ನು ತೋರಿಸಲಾಗಿ ಅದು ಎಫ್ ಐ ಆರ್ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸುತ್ತಾರೆ. ಸದರಿ ದಾಖಲೆಯನ್ನು ನಿಪಿ-4 ಎಂದು ಸಾಕ್ಷಿ ಸಹಿಯನ್ನು ನಿಪಿ-4ಎ ಎಂದು ಗುರುತಸಲಾಯಿತು. ಆರೋಪಿಗಳಿಂದ ವಶಪಡಿಸಿಕೊಂಡ ಟೆಟ್ರ ಪ್ಯಾಕು ಮತ್ತು ಬ್ಯಾಗನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮುಮ 1 , 2 ಎಂದು ಗುರುತಿಸಲಾಯಿತು. ಆರೋಪಿ ನೋಡಿದರೆ ಗುರುತಿಸಬಲ್ಲೆ. ಈ ದಿನ ಆರೋಪಿ ಗೈರು ಹಾಜರಾಗಿದ್ದು ಆರೋಪಿ ಗುರುತಿನ ಬಗ್ಗೆ ಆರೋಪಿ ಪರ ವಕಿಲರು ತಕರಾರು ಇಲ್ಲ ಎಂದು ನುಡಿದಿದ್ದಾರೆ.

**<u>ಪಾಟೀಸವಾಲುಃ- ಆರೋಪಿ ಪರ ವಕೀಲರಿಂದಃ-</u>**

**3.** ಹಲಗೂರು ಸರ್ಕಲ್ ನಮ್ಮ ಠಾಣೆಯಿಂದ ಅರ್ಧ ಫರ್ಲಾಂಗ್ ದೂರ ಆಗುತ್ತದೆ. ಹಲಗೂರು ಸರ್ಕಲವರೆಗೆ ಜನಸಂದಣಿ ಇರುತ್ತದೆ ಎಂದರೆ ಸರಿ. ನಾವು ಠಾಣೆಯಿಂದ 3 ಜನ 3 ದ್ವಿಚಕ್ರ ವಾಹನದಲ್ಲಿ ಹುರಟಿರುತ್ತೇವೆ. ಚಾಸ 2 , 3 ರವರಾದ ಟಿ ಕೆ ಹಳ್ಳಿ ಮತ್ತು ಮಾರಗೌಡನಹಳ್ಳಿ ಗ್ರಾಮ ಹಲಗೂರಿನಿಂದ 2-3 ಕಿ , ಮೀ ದೂರದಲ್ಲಿ ಇದೆ. ಘಟನ ಸ್ಥಳಕು ಮತ್ತು ಮೇಲೆ ಹೇಳಿದ ಗ್ರಾಮಗಳಿಗು ಸುಮಾರು 10 ಕಿ ಮೀ ದೂರ ಆಗುತ್ತದೆ. ಚಾಸ 6 ರಿಂದ 8 ಮುತ್ತತ್ತಿ ಚೆಕ್ ಪೋಸ್ಟು ಬಳಿ ಇದ್ದಂತಹ ವ್ಯಕ್ತಿಗಳು. ನಾವು ಮುತ್ತತ್ತಿ ಚೆಕ್ ಪೋಸ್ಟ್ ಬಳಿ ಹೋದಾಗ ಆರೋಪಿ ಸದರಿ ಚೆಕ್ ಪೋಸ್ಟು ಬಳಿ ಸುಮಾರು 50 ಅಡಿ ಅಂತರದಲ್ಲಿ ಹೋಗುತ್ತಿದ್ದರು.ಆರೋಪಿಯಿಂದ ವಶಪಡಿಸಿಕೊಂಡ ಬ್ಯಾಗು ಯಾವ

ರೀತಿಯದ್ದುನಮೂದು ಮಾಡಿರುವುದಿಲ್ಲ. ಅದರ ಬಣ್ಣವನ್ನು ನಮೂದು ಮಾಡದೆ ಇರಲು ತೊಂದರೆ ಇರಲಿಲ್ಲ. ಆರೋಪಿಯಿಂದ ವಶಪಡಿಸಿಕೊಂಡ ಮದ್ಯದ ಟೆಟ್ರ ಪ್ಯಾಕುಗಳ ಮೇಲೆ ನಮ್ಮ ಸಿಬ್ಬಂದಿಗಳ ಸಹಿ ಇರುವುದಿಲ್ಲ. ನಾನು ಯಾವುದೆ ಸ್ಥಳಕ್ಕು ಹೋಗಿರುವುದಿಲ್ಲ ಮತ್ತು ಆರೋಪಿ ಮದ್ಯ ತೆಗೆದುಕೊಂಡು ಹೋಗಿರುವುದಿಲ್ಲ ನಾನು ಮದ್ಯದ ಟೆಟ್ರ ಪ್ಯಾಕುಗಳನ್ನು ಅಮಾನತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪಂಚರ ಸಮಕ್ಷಮ ಮತ್ತು ಸಿಬ್ಬಂದಿಯ ಸಮಕ್ಷಮ ಮಹಜರನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ವಾರಸುದಾರರಿಲ್ಲದ ವಸ್ತುಗಳನ್ನು ಉಪಯೋಗಿಸಿಕೊಂಡು ಠಾಣ ಅಂಕಿಅಂಶಗಳಿಗೋಸ್ಕರ ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚರು ಸ್ಥಳಕ್ಕೆ ಬಂದಿರುವುದಿಲ್ಲ ಮತ್ತು ಸ್ಥಳದಲ್ಲಿ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ.**

**(**ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಿಂದ ಬೆರಳಚ್ಚು ಮಾಡಿಸಲಾಯಿತು**)**

ಓ ಹೇ ಕೇ ಸ ಇ

ಪ್ರಧಾನ ಸಿ.ಜೆ. ಮತ್ತು ಜೆಎಂಎಫ್‌ಸಿ,
ಮಳವಳ್ಳಿ.